# ಸಿಂಪಲ್ ಐಡಿಯಾ ಸೂಪರ್ ಲುಕ್!

■ ಕೆ.ಗಣೇಶ ಕೋಡೂರು
ಚಿತ್ರಗಳು : ಇಂಟರ್ನೆಟ್




'ಡಿಫರೆಂಟಾಗಿರಬೇಕು' ಎಂದು ಹೊರಟರೆ, ಅದಕ್ಕೆ ಹೆಚ್ಚುವರಿ ಹಣ ಖರ್ಚು ಮಾಡಬೇಕು. ಅದು ಎಲ್ಲರಿಂದ, ಎಲ್ಲ ಸಮಯದಲ್ಲೂ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಡಿಫರೆಂಟಾಗಿರಬೇಕು ಎನ್ನುವ ಆಸೆಯನ್ನು ಹೆಚ್ಚಿನವರು ಮನಸ್ಸಿನಲ್ಲೇ ಅಡಗಿಸಿಟ್ಟುಕೊಂಡು ಬಿಡುತ್ತಾರೆ.

ಹಾಗಿದ್ದರೆ ದುಡ್ಡಿದ್ದವರು ಮಾತ್ರವೇ ನಮ್ಮ ನಡುವೆ ಡಿಫರೆಂಟಾಗಿರಬೇಕಾ? ಅವರು ಬಳಸುವ ವಸ್ತುಗಳು ಮಾತ್ರವೇ ಡಿಫರೆಂಟಾಗಿರಬೇಕಾ? 'ಹೌದು' ಎನ್ನುವ ಮೊದಲು, ನೀವು ಇಲ್ಲಿರುವ ಒಂದಿಷ್ಟು ಚಿತ್ರಗಳನ್ನು ಸುಮ್ಮನೆ ಒಮ್ಮೆ ಗಮನಿಸಿ ನೋಡಿ.

ಇಲ್ಲಿ ಡಿಫರೆಂಟ್ ಎನ್ನುವ ನೋಟಕ್ಕೆ 'ದುಡ್ಡು' ಜಾಸ್ತಿ ಖರ್ಚಾಗಿದೆ ಎನ್ನುವುದಕ್ಕಿಂತ, 'ಮೈಂಡ್' ವಿಪರೀತ ಖರ್ಚಾಗಿದೆ! ಅಂದರೆ ತಲೆಗೆ ಹೊಳೆದ ಸಿಂಪಲ್ ಐಡಿಯಾಗಳೇ ಇಲ್ಲಿ ಎಲ್ಲವನ್ನೂ ಡಿಫರೆಂಟ್ ಮಾಡಿದೆ. ನೋಡಿದವರು ಒಮ್ಮೆ ನೋಡಿ 'ವಾವ್!' ಎನ್ನುವುದು ಖಚಿತ. ಇರುವುದರಲ್ಲೇ ಅಥವಾ ಸ್ವಲ್ಪ ದುಡ್ಡು ಕೊಟ್ಟು ತಂದ ವಸ್ತುವನ್ನು ಬಳಸಿಕೊಂಡೇ ನಾವು ಹೇಗೆ ಡಿಫರೆಂಟಾಗಿರಬಹುದು ಎನ್ನುವುದಕ್ಕೆ ಇವು ಉದಾಹರಣೆಗಳಾಗಿವೆ.

ಮಕ್ಕಳು ಆಡುವ ಟೆನಿಸ್ ಬಾಲ್‌ಗೆ ಎಷ್ಟು ಹಣವಿದ್ದೀತು? 20–30 ರೂಪಾಯಿ ಕೊಟ್ಟರೆ ಒಂದೊಳ್ಳೆಯ ಬಾಲ್ ಸಿಗುತ್ತದೆ. ಅಥವಾ ಬಳಸಿ ಸ್ವಲ್ಪ ಒಡೆದು ಹೋದ ಬಾಲ್ ಆದರೂ ಆದೀತು. ಅದರ ಮಧ್ಯ ಭಾಗಕ್ಕೆ ಒಂದು ಸೀಳು ಮಾಡಿ, ಅದನ್ನು ಗೋಡೆಯ ಮೊಳೆಗೆ ನೇತು ಬಿಟ್ಟರೆ, ನಿಮ್ಮ ಕೀಗಳನ್ನು ಇಡುವ ಸ್ಟ್ಯಾಂಡ್! ಲೆಟರ್ ಸ್ಟ್ಯಾಂಡ್‌ನಂತೆ, ಹ್ಯಾಂಡ್ ಕರ್ಚೀಫ್ ಇಡುವ ಪುಟ್ಟ ಹ್ಯಾಂಗರ್ ರೀತಿಯೂ ಕೆಲಸ ಮಾಡುತ್ತದೆ.

ತರಕಾರಿ ತುರಿಯಲು ಬಳಸುವ ತುರಿಮಣೆಯನ್ನೇ ಆಭರಣಗಳನ್ನು ಇಡುವ ಸ್ಟ್ಯಾಂಡ್ ಆಗಿಸುವುದು, ಸೈಕಲ್ ವ್ಹೀಲ್‌ಅನ್ನು ಬಟ್ಟೆ ನೇತಿಡುವ ಹ್ಯಾಂಗರ್ ಆಗಿಸುವುದು, ಫೋನ್ ಕೇಬಲ್‌ನ ಮರದ ದೊಡ್ಡ ರೋಲ್‌ಅನ್ನು ಪುಸ್ತಕದ ತಿರುಗಿಸುವ ಸ್ಟ್ಯಾಂಡ್ ಮಾಡುವುದು, ಪುಸ್ತಕಗಳಲ್ಲೇ ಗಡಿಯಾರ ಮಾಡಿಡುವುದು, ಬಳಸಿದ ಮಿನರಲ್ ವಾಟರ್ ಬಾಟಲಿಯನ್ನು ಹೂವಿನ ಕುಂಡವಾಗಿಸುವುದು, ಸಾಮಾನ್ಯವಾದ ಚಪ್ಪಲಿಗೆ ಬಟ್ಟೆಯಿಂದ ಅಲಂಕಾರ ಮಾಡಿಕೊಳ್ಳುವುದು– ಹೀಗೆ ಸಿಂಪಲ್ ಐಡಿಯಾಗಳಲ್ಲೇ ಸೂಪರ್ ಲುಕ್ ತೋರಬಹುದು.